# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560 009.

ಕವಿಪ್ರನಿನಿ/ಬಿ9/2208/14-15

ದಿನಾಂಕ : 20 NOV 2014

## ಸುತ್ತೋಲೆ

**ವಿಷಯ:-** ಕವಿಪ್ರನಿನಿ ಯಲ್ಲಿನ ನಿರ್ಮಾಣ ಕಾಮಗಾರಿಗಳಿಗೆ ನೈಸರ್ಗಿಕ ಮರಳಿನ ಬದಲಾಗಿ ಉತ್ಪಾದಿತ ಮರಳನ್ನು ಉಪಯೋಗಿಸುವ ಬಗ್ಗೆ.

**ಉಲ್ಲೇಖ:-** 1. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ. ಲೋ.ಇ 72 ಬಿ ಎಂ ಎಸ್ 2013 ದಿನಾಂಕ 31/07/2013.

2. ಬೆಂಗಳೂರು ವೃತ್ತದ ಲೋಕೋಪಯೋಗಿ ಇಲಾಖೆಯ 2014-15 ನೇ ಸಾಲಿನ ದರಪಟ್ಟಿಯಲ್ಲಿನ ಸಾಮಾನ್ಯ ಟಿಪ್ಪಣಿಗಳು.

3. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಮೈಸೂರು ರವರ ಪತ್ರ ಸಂಖ್ಯೆ. 4909-10 ದಿನಾಂಕ 10/10/2014.

*********

ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯ ದಿನಾಂಕ 31/07/2013 ರ ಸುತ್ತೋಲೆಯಲ್ಲಿ ಇಲಾಖೆಯ ನಿರ್ಮಾಣ ಕಾಮಗಾರಿಗಳಿಗೆ ನೈಸರ್ಗಿಕ ಮರಳಿನ ಬದಲಾಗಿ ಉತ್ಪಾದಿತ ಮರಳನ್ನು ಉಪಯೋಗಿಸುವ ಬಗ್ಗೆ ನಿರ್ದೇಶನ ನೀಡಲಾಗಿರುತ್ತದೆ. ರಾಜ್ಯದಲ್ಲಿರುವ ಬೇಡಿಕೆಗೆ ಅನುಸಾರವಾಗಿ ನೈಸರ್ಗಿಕ ಮರಳು ಸರಬರಾಜು ಮಾಡಲು ಸಾಧ್ಯವಿಲ್ಲದಿರುವ ಕಾರಣ, ಹಾಗೂ ನದಿ ಮೂಲಗಳಿಂದ ಮರಳನ್ನು ತೆಗೆಯುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಅಂತರ್ಜಲ ಮಟ್ಟ ಕುಸಿಯುವ ಸಾಧ್ಯತೆ ಇರುವ ಕಾರಣ, ನೈಸರ್ಗಿಕ ಮರಳಿನ ಪರ್ಯಾಯ ಬಳಕೆಯಾಗಿ ಉತ್ಪಾದಿತ ಮರಳನ್ನು ಹೆಚ್ಚಿನ ರೀತಿಯಲ್ಲಿ ಆರ್. ಸಿ. ಸಿ ಕಾಮಗಾರಿಗಳಿಗೆ ಬಳಸಬಹುದಾಗಿರುತ್ತದೆಯೆಂದು ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ. ಮುಂದುವರೆದಂತೆ, ಬೆಂಗಳೂರು ವೃತ್ತದ ಲೋಕೋಪಯೋಗಿ ಇಲಾಖೆಯ 2014-15 ನೇ ಸಾಲಿನ ದರಪಟ್ಟಿಯ ಸಾಮಾನ್ಯ ಟಿಪ್ಪಣಿಯಲ್ಲಿಯೂ ಸಹ ನೈಸರ್ಗಿಕ ಮರಳಿನ ಲಭ್ಯತೆ ಇಲ್ಲದಿದ್ದಲ್ಲಿ ಉತ್ಪಾದಿತ ಮರಳನ್ನು ಕಾಂಕ್ರೀಟ್‌ಗಳಿಗೆ ಶೇಕಡಾ 100 ರಷ್ಟು ಹಾಗೂ ಪ್ಲಾಸ್ಟರಿಂಗ್ ಕೆಲಸಗಳಿಗೆ ಗರಿಷ್ಟ ಶೇಕಡಾ 50 ರಷ್ಟು ಉತ್ಪಾದಿತ ಮರಳನ್ನು ಉಪಯೋಗಿಸಬಹುದೆಂದು ಸೂಚಿಸಲಾಗಿದೆ.

EE(D) 21/11/14 AEE-1 21/11/2014

SEE(IT/MIS)
4

ಈ ಹಿನ್ನೆಲೆಯಲ್ಲಿ, ನಿಗಮದ ನಿರ್ಮಾಣ ಕಾರ್ಯಗಳಲ್ಲಿ ಸರ್ಕಾರದ ನಿರ್ದೇಶನದಂತೆ, ನೈಸರ್ಗಿಕ ಮರಳಿನ ಲಭ್ಯತೆ ಇಲ್ಲದಿದ್ದಲ್ಲಿ, ಉತ್ಪಾದಿತ ಮರಳನ್ನು ಲೋಕೋಪಯೋಗಿ ದರಪಟ್ಟಿಯಲ್ಲಿ ತಿಳಿಸಿರುವಂತೆ ಉಪಯೋಗಿಸಲು ಸೂಚಿಸಿದೆ.

Sudha 20/11/14
ಉಪಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:-

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಪ್ರಸರಣ ವಲಯ, ಕವಿಪ್ರನಿನಿ.
2. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಪ್ರಸರಣ ವೃತ್ತ, ಕವಿಪ್ರನಿನಿ.
3. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಸದರಿ ಸುತ್ತೋಲೆಯನ್ನು ನಿಗಮದ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಬೃಹತ್ ಕಾಮಗಾರಿ/ ಟಿಎಲ್ ಮತ್ತು ಎಸ್ ಎಸ್ ವಿಭಾಗ, ಕವಿಪ್ರನಿನಿ.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ.
7. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ (ಹಣಕಾಸು)/ (ಆ ಮತ್ತು ಮಾ.ಸಂ)/(ಆರ್ ಎ) ಮತ್ತು ಕಂ.ಕಾ ಇವರುಗಳ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.